Reg. No. | | | | | | | | |

**BCMKAL 253**

## ಗುಣಾಂಕ ಆಧಾರಿತ ನಾಲ್ಕನೆಯ ಚತುರ್ಮಾಸ ಬಿ.ಕಾಂ. ಪದವಿ ಪರೀಕ್ಷೆ, ಎಪ್ರಿಲ್/ಮೇ 2017

**(2014-15 ಮತ್ತು ನಂತರದ ಸಾಲಿನವರಿಗೆ)**

**ಕನ್ನಡ**

**ಕನ್ನಡ ಭಾಷಾ ಪತ್ರಿಕೆ**

ಅವಧಿ : 3 ಗಂಟೆಗಳು | ಗರಿಷ್ಠಾಂಕಗಳು : 80

Shri Dharmasthala Manjunatheshwara College of Business Management Library MANGALORE - 575 003

### ಭಾಗ – 1 (ಕಾವ್ಯ)

I. ಅ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ : **(1×8=8)**

1) ಅಭಯರುಚಿ ಮತ್ತು ಅಭಯಮತಿಯರು ಮಾರಿಗುಡಿಯನ್ನು ಪ್ರವೇಶಿಸಿದ ಸಂದರ್ಭವನ್ನು ಮತ್ತು ಅದರ ಪರಿಣಾಮವನ್ನು ವಿವರಿಸಿರಿ.

2) ಕುಲಕ್ಕಿಂತ ಗುಣ ಮುಖ್ಯವೆಂಬುದನ್ನು ಕನಕದಾಸರು ಹೇಗೆ ಪ್ರತಿಪಾದಿಸಿದ್ದಾರೆ ?

ಆ) ಕೆಳಗಿನ ಪ್ರಶ್ನೆಗಳಲ್ಲಿ **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರ ಬರೆಯಿರಿ : **(1×6=6)**

1) ಕವಿಯ ಸೌಂದರ್ಯಾನುಭೂತಿಯು 'ದೇವರು ರುಜು ಮಾಡಿದನು' ಕವನದಲ್ಲಿ ಅಭಿವ್ಯಕ್ತಗೊಂಡಿರುವ ಬಗೆಯನ್ನು ಕುರಿತು ಬರೆಯಿರಿ.

2) ಕಿತ್ತೂರು ರಾಣಿ ಚೆನ್ನಮ್ಮನ ಧೈರ್ಯ ಸಾಹಸಗಳನ್ನು ಲಾವಣಿಯ ಹಿನ್ನೆಲೆಯಲ್ಲಿ ನಿರೂಪಿಸಿರಿ.

ಇ) ಕೆಳಗಿನವುಗಳಲ್ಲಿ **ಒಂದು** ವಿಷಯದ ಕುರಿತು ಟಿಪ್ಪಣಿ ಬರೆಯಿರಿ : **(1×4=4)**

1) ಶಾಂಡಿಲ್ಯ.

2) ಮಾಲತಿ ಪಟ್ಟಣ ಶೆಟ್ಟಿ.

II. ಅ) **ಒಂದು** ಪದ್ಯಭಾಗದ ಸಂದರ್ಭವನ್ನು ಸೂಚಿಸಿ ಭಾವ ಸ್ವಾರಸ್ಯವನ್ನು ವಿವರಿಸಿರಿ : **(1×5=5)**

1) ನಿಂದು ನರಪತಿ ತಳಾಱಂ
ಗೆಂದಂ ನೀನ್ ಬರಿಸು ಮನುಜಯುಗಮಂ ಮುನ್ನಂ
ಕೊಂದರ್ಚಿಸುವೆಂ ಪೂಜೆಯಾ
ಳೆಂದಿನ ಪರಿ ತಪ್ಪೆ ದೇವಿ ತಪ್ಪದೆ ಮಾಣಳ್

ಪು.ತಿ.ನೋ.

2) ಚೆಂಡಾಟವೆಂಬುದು ಸುಜುಗಾಹಿ ಮಕ್ಕಳ
ತಂಡಕಲ್ಲದೆ ನೃಪಸುತರ
ಮಂಡಳಿಗುಚಿತವೆ ಸಲ್ಲದು ಗಂಡರ
ಗಂಡ ಬೇಡೀ ಚೆಂಡಿನಾಟ.

ಆ) ಕೆಳಗಿನ ವಾಕ್ಯಗಳಲ್ಲಿ ಯಾವುದಾದರೂ **ಎರಡು** ವಾಕ್ಯಗಳಿಗೆ ಸಂದರ್ಭವನ್ನು ಸೂಚಿಸಿ ಸ್ವಾರಸ್ಯವನ್ನು ವಿವರಿಸಿರಿ : **(2×4=8)**

1) ಕವಿಮನ ನಾಕದಿ ನೆಲೆಸಿತ್ತು.

2) ಚೈತನ್ಯಕ್ಕಾಗಿ ಕಟ್ಟು ಮೀರಿ ಆಚೆ ನುಗ್ಗಬೇಕು.

3) ಗಂಡಾಗಿ ರಣಕ ಇಳಿದಾಳ.

ಇ) **ಪ್ರತಿಯೊಂದು** ಪ್ರಶ್ನೆಗೂ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ : **(4×1=4)**

1) ಜನ್ನನು ಯಾವ ಅರಸನ ಆಸ್ಥಾನ ಕವಿಯಾಗಿದ್ದನು ?

2) ಕನಕದಾಸರ ಜನ್ಮಸ್ಥಳ ಯಾವುದು ?

3) ಲಾವಣಿ ಎಂದರೇನು ?

4) ಜೆನ್ ಎಂದರೇನು ?

## ಭಾಗ – 2 (ಮಹಾಕಾವ್ಯ)

III. ಅ) ಕೆಳಗಿನ ಪ್ರಶ್ನೆಗಳಲ್ಲಿ **ಒಂದು** ಪ್ರಶ್ನೆಗೆ ಉತ್ತರಿಸಿರಿ : **(1×8=8)**

1) ಗೌತಮ ಮತ್ತು ದೇವದತ್ತರ ನಡುವೆ ನಡೆದ ವಾಗ್ವಾದದಲ್ಲಿ ಗೌತಮನ ಕರುಣಾಭಾವ ವ್ಯಕ್ತವಾಗಿರುವ ಪರಿಯನ್ನು ವಿವರಿಸಿರಿ.

2) ಹಿಂಸೆ ಮತ್ತು ಯುದ್ಧದ ಬಗೆಗೆ ಗೌತಮ ಹೊಂದಿದ್ದ ನಿಲುವನ್ನು ವಿವರಿಸಿರಿ.

ಆ) ಕೆಳಗಿನ ಪ್ರಶ್ನೆಗಳಲ್ಲಿ **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : **(1×5=5)**

1) ಯಶಸ್‌ನ ತಂದೆತಾಯಿ, ಪತ್ನಿ, ಸ್ನೇಹಿತರು ಯಶಸ್‌ಗಾಗಿ ನಡೆಸಿದ ಹುಡುಕಾಟದ ದುಃಖವನ್ನು ಚಿತ್ರಿಸಿರಿ.

2) ಬಿಂಬಸಾರ ಮತ್ತು ಗೌತಮನ ನಡುವೆ ನಡೆದ ಸಂಭಾಷಣೆಯ ಸ್ವಾರಸ್ಯವನ್ನು ಸಂಗ್ರಹಿಸಿರಿ.

ಇ) ಕೆಳಗಿನ ಪ್ರಶ್ನೆಗಳಿಗೆ **ಒಂದು** ವಾಕ್ಯದಲ್ಲಿ ಉತ್ತರಿಸಿರಿ : **(2×1=2)**

1) ಯಶೋಧರೆ ಯಾರು ?

2) ಕಂಥಕ ಎಂದರೆ ಏನು ?

## ಭಾಗ – 3 (ಗದ್ಯ)

IV. ಅ) ಕೆಳಗಿನ ಪ್ರಶ್ನೆಗಳಲ್ಲಿ **ಒಂದು** ಪ್ರಶ್ನೆಗೆ ಉತ್ತರಿಸಿರಿ : (1×8=8)

1) 'ಸಹಾಯಂ' ಎಂಬ ವಿಶಿಷ್ಟ ಅಧಿಕಾರಿಯ ಬದುಕು ಮತ್ತು ವ್ಯಕ್ತಿತ್ವವನ್ನು ಕುರಿತು ಬರೆಯಿರಿ.

2) ಅನಾಥಶವದ ಸಂಸ್ಕಾರವೂ ಧನದಾಹಿಗಳಲ್ಲಿ ಸ್ವಾರ್ಥಕ್ಕೆ ಬಳಕೆಯಾಗುವುದನ್ನು ಬೀಚಿ ಹೇಗೆ ಚಿತ್ರಿಸಿದ್ದಾರೆ ? ವಿವರಿಸಿರಿ.

ಆ) **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ : (1×5=5)

1) ಹೊಳೆಗಳಿಗೂ ಜನರ ಬದುಕಿಗೂ ಇರುವ ಸಂಬಂಧವನ್ನು ರಹಮತ್ ತರೀಕೆರೆಯವರು ತಮ್ಮ ಪ್ರಬಂಧದಲ್ಲಿ ಹೇಗೆ ಚಿತ್ರಿಸಿದ್ದಾರೆ ?

2) ಅರ್ಥಗಾರಿಕೆ ಎಂದರೇನು ? ಒಂದು ಉದಾಹರಣೆಯೊಂದಿಗೆ ತಿಳಿಸಿ.

ಇ) ಕೆಳಗಿನ ಪ್ರಶ್ನೆಗಳಲ್ಲಿ **ಪ್ರತಿಯೊಂದಕ್ಕೂ ಒಂದು** ವಾಕ್ಯದಲ್ಲಿ ಉತ್ತರಿಸಿರಿ : (2×1=2)

1) ದಧೀಚಿ ಎಂದರೆ ಯಾರು ?

2) ಧುರವೀಳ್ಯ ಎಂದರೇನು ?

Shri Dharmasthala Manjunatheshwara College of Business Management Library MANGALORE - 575 003

## ಭಾಗ – 4 (ಕ್ರಿಯಾತ್ಮಕ ಕನ್ನಡ)

V. ಅ) **ಒಂದು** ಪ್ರಶ್ನೆಗೆ ಉತ್ತರಿಸಿರಿ : (1×8=8)

1) ಸಮಾನಾರ್ಥಕ ಪದಕೋಶ ಎಂದರೇನು ? ವಿವರಿಸಿರಿ.

2) ಭಾಷೆ–ಪದಗಳು–ಅರ್ಥಗಳು ಇವುಗಳನ್ನು ವಿವರಿಸಿರಿ.

ಆ) **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ : (1×5=5)

1) ಅಡಗು–ಮರೆಯಾಗು, ಶಕ್ತ–ಶಕ್ತಿವಂತ ಈ ಪದಗಳ ಸೂಕ್ಷ್ಮ ಅರ್ಥಭಿನ್ನತೆಯನ್ನು ವಿವರಿಸಿರಿ.

2) ಪಡೆನುಡಿ ಎಂದರೇನು ? ಉದಾಹರಣೆಯೊಂದಿಗೆ ವಿವರಿಸಿ.

ಇ) ಕೆಳಗಿನ ಪ್ರಶ್ನೆಗಳಿಗೆ **ಒಂದು** ವಾಕ್ಯದಲ್ಲಿ ಉತ್ತರಿಸಿ : (2×1=2)

1) ಹಸಿವು ಈ ಪದದ ಎರಡು ಸಮಾನಾರ್ಥಕ ಪದಗಳನ್ನು ಬರೆಯಿರಿ.

2) 'ಆನ್ ಈಗಲ್ಸ್ ವಿಂಗ್ಸ್' ಇದು ಯಾರು ಬರೆದ ಕೃತಿ ?

---